RNU AIR DHARWAD

APRIL 15, 2025

# AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಗ್ರಾಮ ಪಂಚಾಯಿತಿ,** ಅರಿವು ಕೇಂದ್ರಗಳಲ್ಲಿ, ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ, ಮಕ್ಕಳಿಗೆ ಬೇಸಿಗೆ ಶಿಬಿರ.
- **ಕಲ್ಯಾಣ ಕರ್ನಾಟಕದ,** ಏಳು ಜಿಲ್ಲೆಗಳ ಯುವ ಉದ್ಯೋಗಾಕಾಂಕ್ಷಿಗಳಿಗಾಗಿ, ನಾಳೆ ಕಲಬುರಗಿಯಲ್ಲಿ, ವಿಶೇಷ ಉದ್ಯೋಗ ಮೇಳ.
- **ಹುಬ್ಬಳ್ಳಿ-ಧಾರವಾಡದ ಸೂಕ್ಷ್ಮ ಪ್ರದೇಶಗಳಲ್ಲಿ,** ಗಸ್ತು ಹಾಗೂ ಕಣ್ಗಾವಲಿಗೆ ಕ್ರಮ – ಸಂತೋಷ ಲಾಡ.
- **ಭಾರತ ರತ್ನ,** ಬಾಬಾಸಾಹೇಬ ಅಂಬೇಡ್ಕರ್ ಅವರ, 134ನೇ ಜಯಂತಿ; ನಾಡಿನಾದ್ಯಂತ ಗೌರವ ನಮನ.

<><><>

**ರಾಜ್ಯದ ಗ್ರಾಮ ಪಂಚಾಯಿತಿಗಳ,** ಅರಿವು ಕೇಂದ್ರದಲ್ಲಿ, ಗ್ರಾಮೀಣ ಮಕ್ಕಳಿಗೆ ಬೇಸಿಗೆ ಶಿಬಿರಗಳನ್ನು ಆಯೋಜಿಸಲು, ಸಿದ್ಧತೆ ಕೈಗೊಳ್ಳಲಾಗಿದೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ, ಪ್ರಿಯಾಂಕ್ ಖರ್ಗೆ, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಶಾಲೆಗಳಿಗೆ ಬೇಸಿಗೆ ರಜೆ ಆರಂಭವಾಗಿದೆ. ಈ ರಜೆ ಅಂತ್ಯವಾಗುವ ವರೆಗೆ, ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ, ಮಕ್ಕಳ ಸ್ನೇಹಿ ಶಿಬಿರಗಳ ಆಯೋಜನೆಗೆ, ವ್ಯವಸ್ಥೆ ಮಾಡಲಾಗಿದೆ ಎಂದಿದ್ದಾರೆ. ಈ ಶಿಬಿರದಲ್ಲಿ ಆಟ, ಕಲಾತ್ಮಕ ಚಟುವಟಿಕೆ, ವಿಜ್ಞಾನ ವಿ ’ಯಗಳು, ನಾಯಕತ್ವ ಮತ್ತು ಸಂವಹನ ಕೌಶಲ, ಪರಿಸರ ಮತ್ತು ಸಾಮಾಜಿಕ ಕಾಳಜಿ ಸೇರಿದಂತೆ, ಮಕ್ಕಳಲ್ಲಿ ಸೃಜನಾತ್ಮಕ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು, ಕ್ಷೇತ್ರ ಭೇಟಿ ಜೋಡಿಸಿ, ಬೇಸಿಗೆ ಶಿಬಿರವನ್ನು ಮನೋರಂಜನೀಯ ಗೊಳಿಸಲಾಗಿದೆ ಎಂದು, ಸಚಿವ ಖರ್ಗೆ ಮಾಹಿತಿ ನೀಡಿದ್ದಾರೆ.

<><><>

**ಚಿಕ್ಕಬಳ್ಳಾಪುರ ಜಿಲ್ಲೆಯ,** 10 ರಿಂದ 15 ವ ’ರ್ದೊಳಗಿನ ಮಕ್ಕಳಿಗಾಗಿ, ನಾಡಿದ್ದು 17 ರಿಂದ ಮೇ 2ನೇ ತಾರೀಖಿನ ವರೆಗೆ, ‘ಪೊಲೀಸ್ ಚಿಟ್ಟೆ’ಗಳು ಶೀರ್ಷಿಕೆ ಅಡಿ, ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿದೆ ಎಂದು, ಜಿಲ್ಲಾ ಪೊಲೀಸ್ ವರಿ ಠ್ಠಾಧಿಕಾರಿ ಕುಶಲ್ ಚೌಕ್ಸೆ ತಿಳಿಸಿದ್ದಾರೆ.

<><><>

**ಕಲ್ಯಾಣ ಕರ್ನಾಟಕದ, ಯುವ** ಉದ್ಯೋಗಾಕಾಂಕ್ಷಿಗಳಿಗೆ ಅನುಕೂಲ ಕಲ್ಪಿಸಲು, ನಾಳೆ ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯ ವರೆಗೆ, ಕಲಬುರಗಿಯ, ಕೆ.ಸಿ.ಟಿ. ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ, ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು, ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಶರಣಪ್ರಕಾಶ ಪಾಟೀಲ, ಕಲಬುರಗಿಯಲ್ಲಿ ತಿಳಿಸಿದ್ದಾರೆ. Skill connect.kaushal kar.com ನಲ್ಲಿ ಅಭ್ಯರ್ಥಿಗಳು ಹೆಸರು ನೊಂದಾಯಿಸಲು, ಕೋರಲಾಗಿದೆ.

<><><>

**ರಾಜ್ಯ ರಸ್ತೆ ಸಾರಿಗೆ ನಿಗಮದಿಂದ,** ಉದ್ಯೋಗಾರ್ಥಿಗಳ ಅನುಕೂಲಕ್ಕಾಗಿ, ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳಿಂದ, ಒಟ್ಟು 292 ಬಸ್‌ಗಳನ್ನು ನಿಯೋಜಿಸಿದ್ದಾಗಿ, ಕಲಬುರಗಿ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಂ. ರಾಚಪ್ಪ ತಿಳಿಸಿದ್ದಾರೆ.

<><><>

**ಕಲಬುರಗಿಯ, ‘ಜಿಮ್ಸ್ ಆಸ್ಪತ್ರೆ’ಯಲ್ಲಿ,** 116 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ, ಸೂಪರ್ ಸ್ಪೆ ಾಲಿಟಿ ಆಸ್ಪತ್ರೆಯನ್ನು, ನಾಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ ಎಂದು, ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಶರಣಪ್ರಕಾಶ ಪಾಟೀಲ, ತಿಳಿಸಿದ್ದಾರೆ. ಕಲಬುರಗಿಯ ಕೆ.ಸಿ.ಟಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಅವರು ಸುದ್ದಿಗೋಷ್ಠಿ ನಡೆಸಿದರು. ರಾಜ್ಯಸಭೆ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಹಾಗೂ ಅನೇಕ ಗಣ್ಯರು ಪಾಲ್ಗೊಂಡು, ಕಿದ್ವಾಯಿ ಆಸ್ಪತ್ರೆಯಲ್ಲಿ, ಅತ್ಯಾಧುನಿಕ ಬ್ರಾಕಿಥೆರಪಿ ಸೇವೆ ಸೇರಿದಂತೆ, 492 ಕೋಟಿ ರೂಪಾಯಿ ಮೊತ್ತದ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ, ಚಾಲನೆ ನೀಡಲಿದ್ದಾರೆ, ಎಂದರು.

<><><>

**ಸಾರ್ವಜನಿಕ ಸುರಕ್ಷತೆಯ ಹಿತದೃಷ್ಟಿಯಿಂದ,** ಹುಬ್ಬಳ್ಳಿ-ಧಾರವಾಡದ ಸೂಕ್ಷ್ಮ ಪ್ರದೇಶಗಳಲ್ಲಿ, ಸಿ.ಸಿ. ಟಿವಿ ಕ್ಯಾಮೆರಾಗಳ ಅಳವಡಿಕೆ, ಕಟ್ಟುನಿಟ್ಟಿನ ಗಸ್ತು ವ್ಯವಸ್ಥೆಗೆ ಕ್ರಮ ಕೈಗೊಳ್ಳುವುದಾಗಿ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ ತಿಳಿಸಿದ್ದಾರೆ. ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ, ಕೊಲೆಗೀಡಾದ ಐದು ವರ್ಷದ ಬಾಲಕಿಯ ಪಾಲಕರಿಗೆ, ಸಚಿವರು ಸಾಂತ್ವನ ಹೇಳಿದರು. ಸರ್ಕಾರದಿಂದ ಬಾಲಕಿಯ ಕುಟುಂಬಕ್ಕೆ ಪರಿಹಾರ ಹಾಗೂ ಆಶ್ರಯ ಕಲ್ಪಿಸಲಾಗುವುದು, ಎಂದರು. ಆರೋಪಿಯನ್ನು ಸ್ಥಳ ಮಹಜರಿಗೆ ಕರೆದೊಯ್ದ ಸಂದರ್ಭದಲ್ಲಿ, ಗಾಯಗೊಂಡ ಪೊಲೀಸ್ ಸಿಬ್ಬಂದಿಯ ಆರೋಗ್ಯ ವಿಚಾರಿಸಿದರು.

<><><>

**ಪೇಂಟೆಡ್ ಸ್ಪರ್ ಫೌಲ್,** ಅಪರೂಪಕ್ಕೆ ಕಾಣಸಿಗುವ, ಬಹುತೇಕ ವಿಲುಪ್ತಿಯ ಅಂಚಿನಲ್ಲಿರುವ, ಬಣ್ಣದ ಚಿಟ್ಟುಕೋಳಿ, ಬೆಳಗಾವಿ ಜಿಲ್ಲೆ, ರಾಮದುರ್ಗ ಹೊರವಲಯದ, ಮುಳ್ಳೂರು ಬೆಟ್ಟದಲ್ಲಿ ಪತ್ತೆಯಾಗಿದೆ. ಜೇಡಗಳ ಬಗ್ಗೆ ಅಧ್ಯಯನ ನಿರತ ಹವ್ಯಾಸಿ ಹಾಗೂ ಕೆ.ಪಿ.ಟಿ.ಸಿ.ಎಲ್. ಉದ್ಯೋಗಿ, ಶಶಿಕಾಂತ ಕಂಬನ್ನವರ್, ವಿನೋದ ಜೈನ್ ಹಾಗೂ ಪ್ರಕಾಶ ಪೂಜಾರ ಚಾರಣದ ವೇಳೆ, ದಾಖಲಿಸಿದ್ದಾರೆ.

<><><>

**ಗದಗ ಜಿಲ್ಲೆ ನರಗುಂದದ,** ಜೀವವೈವಿಧ್ಯ ವಿಜ್ಞಾನಿ ಮಂಜುನಾಥ ನಾಯಕ್, ಪ್ರದೇಶ ಸಮಾಚಾರಕ್ಕಾಗಿ, ಪೇಂಟೆಡ್ ಸ್ಪರ್ ಫೌಲ್ ಬಗ್ಗೆ, ಮಾಹಿತಿ ನೀಡಿದ್ದಾರೆ.

<><><>

**ಸಂವಿಧಾನ ಶಿಲ್ಪಿ, ಭಾರತ ರತ್ನ,** ಬಾಬಾಸಾಹೇಬ ಅಂಬೇಡ್ಕರ್ ಅವರ, 134ನೇ ಜಯಂತಿ ಹಿನ್ನೆಲೆ, ನಾಡಿನಾದ್ಯಂತ ಸಂಭ್ರಮ ಹಾಗೂ ಶ್ರದ್ಧೆಯಿಂದ ಅವರ ಸ್ಮೃತಿಗೆ ಗೌರವ ಸಲ್ಲಿಸಿದ ವರದಿಗಳು ಬಂದಿವೆ.

<><><>

**ರಾಜಭವನದಲ್ಲಿ** ಅಂಬೇಡ್ಕರ್ ಪುತ್ಥಳಿಗೆ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಪು ್ಪ ನಮನ ಸಲ್ಲಿಸಿದರು.

<><><>

**ಬೆಂಗಳೂರಿನ ವಿಧಾನಸೌಧದ ಆವರಣದಲ್ಲಿರುವ,** ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಗೌರವ ಸಲ್ಲಿಸಿ, ಮಾತನಾಡಿ, ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ, ಒಟ್ಟು 33 ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ – ಡಿ.ಸಿ.ಆರ್.ಇ ಪೊಲೀಸ್ ಠಾಣೆಗಳು, ಶೀಘ್ರ ಕಾರ್ಯಾರಂಭಿಸಲಿವೆ. ಸಾಂಕೇತಿಕವಾಗಿ, ಬೆಂಗಳೂರಿನಲ್ಲಿ ಒಂದು, ಕೇಂದ್ರ ಡಿ.ಸಿ.ಆರ್.ಇ ಠಾಣೆಯನ್ನು ಉದ್ಘಾಟಿಸಿದ್ದಾಗಿ, ನುಡಿದರು.

<><><>

**ಮೈಸೂರು ವಿಶ್ವವಿದ್ಯಾಲಯದಲ್ಲಿ** ಸಂವಿಧಾನ ಪೀಠ ಮತ್ತು ಬೆಂಗಳೂರಿನಲ್ಲಿ, ಬೃಹತ್ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಲಾಗುವುದು ಎಂದು ಸಿದ್ದರಾಮಯ್ಯ ಘೋಷಿಸಿದರು.

<><><>

**ಬಾಬಾಸಾಹೇಬರು, ಬೆಳಗಾವಿ** ಹಾಗೂ ನಿಪ್ಪಾಣಿಗೆ ಭೇಟಿ ನೀಡಿ, 100 ವರ್ಷಗಳು ಪೂರ್ಣಗೊಂಡ ಹಿನ್ನೆಲೆ, ಬಿಜೆಪಿ ವತಿಯಿಂದ ಇಂದು, 'ಭೀಮ ಹೆಜ್ಜೆ 100ರ ಸಂಭ್ರಮ' ರಥ ಯಾತ್ರೆ ಹಾಗೂ ಸಮಾವೇಶ ನಿಪ್ಪಾಣಿಯಲ್ಲಿ ಜರುಗಲಿದೆ. ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ.

<><><>

**ಸರ್ಕಾರಿ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ** ಮೀಸಲಾತಿ ನೀಡಿರುವ ಕರ್ನಾಟಕದ ಕಾಂಗ್ರೆಸ್ ರಾಜ್ಯ ಸರ್ಕಾರದ ವಿರುದ್ಧ ಪ್ರಧಾನಮಂತ್ರಿ ನರೇಂದ್ರ ಮೋದಿ ಹರ್ಯಾಣದ ಹಿಸ್ಸಾರ್ ನಲ್ಲಿ ಟೀಕಿಸಿದ್ದಾರೆ. ಧರ್ಮದ ಆಧಾರದಲ್ಲಿ ಮೀಸಲಾತಿ ಇರಬಾರದು ಎಂದು ಡಾಕ್ಟರ್ ಬಿ.ಆರ್ ಅಂಬೇಡ್ಕರ್ ಪ್ರತಿಪಾದಿಸಿದ್ದರು. ಧರ್ಮಾಧಾರಿತ ಮೀಸಲಾತಿ ಸಂವಿಧಾನ ವಿರೋಧಿ ಎಂದು ಪ್ರಧಾನಮಂತ್ರಿ ನುಡಿದರು.

<><><>

**ಧಾರವಾಡದ, ಬಹುಶಿಸ್ತೀಯ** ಅಭಿವೃದ್ಧಿ ಸಂಶೋಧನಾ ಕೇಂದ್ರ –ಸಿ.ಎಮ್.ಡಿ.ಆರ್., ಅಂಬೇಡ್ಕರ್ ಜಯಂತಿ ಹಿನ್ನೆಲೆ, ಚಿತ್ರಕಲಾ ಸ್ಪರ್ಧೆ ಆಯೋಜಿಸಿತ್ತು. 7 ಜಿಲ್ಲೆಗಳಿಂದ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. 'ಅಂಬೇಡ್ಕರ್ ಅವರ ಅಂತರ್ಗತ ಭಾರತದ ಕನಸು' ಮತ್ತು 'ವಿಕಸಿತ ಭಾರತ; ಬಾಬಾಸಾಹೇಬರ ದೃಷ್ಟಿಕೋನ' ವಿಷಯದ ಚಿತ್ರಕಲಾ ಸ್ಪರ್ಧೆಯಲ್ಲಿ, ಶಿವರಾಜ ಪೂಜಾರಿ ಪ್ರಥಮ ಬಹುಮಾನ, ಮಂಜುಶ್ರೀ ಗಾವಡೆ ಹಾಗೂ ಆನಂದ ಇಮಡೆನ್ನವರ ಅವರಿಗೆ ಸಿ.ಎಮ್.ಡಿ.ಆರ್.ನಿರ್ದೇಶಕ ಬಸವಪ್ರಭು ಜಿರ್ಲಿ ದ್ವಿತೀಯ ಬಹುಮಾನ ನೀಡಿ ಗೌರವಿಸಿದರು. ಹಿರಿಯ ಕಲಾವಿದರಾದ ಬಿ.ಮಾರುತಿ ಹಾಗೂ ಎಫ್.ವಿ.ಚಿಕ್ಕಮಠ ನಿರ್ಣಾಯಕರಾಗಿ ಪಾಲ್ಗೊಂಡಿದ್ದರು.

<><><>

**ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ,** ನಿರ್ಮಾಣ ಸಹಾಯಕರಾಗಿ ವೃತ್ತಿ ಜೀವನ ಆರಂಭಿಸಿದ್ದ, ಶ್ರೀಕಾಂತ ಶಿಂಗೆ ಅವರು, ತುಮಕೂರಿನಲ್ಲಿ ನಿನ್ನೆ ನಿಧನರಾದರು. ಅವರಿಗೆ 72 ವರ್ಷ ವಯಸ್ಸಾಗಿತ್ತು. ಬಿಹಾರದ ದಾಲ್ಟೋಗಾಂಜಿ ದೂರದರ್ಶನ ಕೇಂದ್ರದಲ್ಲಿ ಕಾರ್ಯಕ್ರಮ ನಿರ್ವಾಹಕರಾಗಿ, ಬಳಿಕ ಪುದುಚೆರಿ, ಬೆಂಗಳೂರು ಕೇಂದ್ರಗಳಲ್ಲಿ ಸೇವೆ ಸಲ್ಲಿಸಿ ಅವರು ನಿವೃತ್ತರಾಗಿದ್ದರು. ಇಂದು, ಬೆಳಗ್ಗೆ 9 ಗಂಟೆಗೆ, ಪಾರ್ಥಿವ ಶರೀರದ ಅಂತ್ಯಕ್ರಿಯೆ, ಬೆಳಗಾವಿ ಜಿಲ್ಲೆ, ನಿಪ್ಪಾಣಿ ತಾಲೂಕು, ಲಖನಾಪುರದಲ್ಲಿ ಜರುಗಲಿದೆ.

<><><>

**ರಾಯಚೂರು ಶಾಖೋತ್ಪನ್ನ,** ವಿದ್ಯುತ್ ಸ್ಥಾವರದ ನಾಲ್ಕನೇ ಘಟಕದಲ್ಲಿ ಬೆಂಕಿ ಅವಘಡ ಸಂಭವಿಸಿ ಅಪಾರ ಹಾನಿಯಾಗಿದೆ. ಶಕ್ತಿನಗರದಲ್ಲಿರುವ ಆರ್.ಟಿ.ಪಿ.ಎಸ್ ನಾಲ್ಕನೇ ಘಟಕದಲ್ಲಿ ವಿದ್ಯುತ್ ಪರಿವರ್ತಕದಲ್ಲಿ ಹೊತ್ತಿಕೊಂಡ ಬೆಂಕಿ, ನಿಯಂತ್ರಣ ಮೀರಿ ಹಬ್ಬಿತು ಎಂದು ವರದಿ ತಿಳಿಸಿದೆ.

<><><>

**ವನ್ಯಜೀವಿಗಳ ಹಿತದೃಷ್ಟಿಯಿಂದ,** ಬಂಡೀಪುರ ರಾಷ್ಟ್ರೀಯ ಉದ್ಯಾನದ ಹೆದ್ದಾರಿಯಲ್ಲಿ, ರಾತ್ರಿ ವೇಳೆ ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಡಬಾರದು ಎಂದು, ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಹೇಳಿದ್ದಾರೆ.

<><><>

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,** ಪ್ರಸಕ್ತ ಸಾಲಿನಲ್ಲಿ, 4 ಸಾವಿರದ 930 ಕೋಟಿ ರೂಪಾಯಿ, ಆಸ್ತಿ ತೆರಿಗೆ ಸಂಗ್ರಹಿಸಿದೆ. ಈ ಬಾರಿ, ಕಳೆದ ವರ್ಷಕ್ಕಿಂತ ಸಾವಿರ ಕೋಟಿ ರೂಪಾಯಿ ಹೆಚ್ಚು ಆಸ್ತಿ ಕರ ಸಂಗ್ರಹವಾಗಿದೆ.

<><><>

**ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ,** ನಾಗಲಕ್ಷ್ಮೀ ಚೌಧರಿ, ಇಂದಿನಿಂದ ಮೂರು ದಿನಗಳ ಕಾಲ, ದಾವಣಗೆರೆ ಜಿಲ್ಲೆಯ ಪ್ರವಾಸ ಕೈಗೊಂಡಿದ್ದಾರೆ. ಮಹಿಳೆಯರಿಂದ ಅಹವಾಲು ಸ್ವೀಕರಿಸಲಿದ್ದಾರೆ.

<><><>

**ಕೋಲಾರ ಜಿಲ್ಲಾ ಪೊಲೀಸ್,** ನಾಗರಿಕರಿಗೆ ಬಂದೂಕು ತರಬೇತಿ ಶಿಬಿರವನ್ನು ಆಯೋಜಿಸಿದೆ. ಜಿಲ್ಲಾ ಸಶಸ್ತ್ರ ಪೊಲೀಸ್ ಪಡೆ ಘಟಕದಲ್ಲಿ ಇಂದಿನಿಂದ ಆಸಕ್ತರು ಅರ್ಜಿ ಭರ್ತಿ ಮಾಡಿ ನೀಡಬಹುದು.

<><><>

**ಮುಖ್ಯಮಂತ್ರಿ ಸಿದ್ದರಾಮಯ್ಯ** ನಾಳೆ, ಬೀದರಗೆ ಭೇಟಿ ನೀಡಿ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ, ಚಾಲನೆ ನೀಡಲಿದ್ದಾರೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

<><><>

**ಬಾಲ ಹಾಗೂ ಕಿಶೋರ ಕಾರ್ಮಿಕರು** ಕಂಡುಬಂದಲ್ಲಿ, ಮಕ್ಕಳ ಉಚಿತ ಸಹಾಯವಾಣಿ ಸಂಖ್ಯೆ 1098 ಕ್ಕೆ ಕರೆ ಮಾಡಿ, ಮಾಹಿತಿ ನೀಡುವಂತೆ, ಉತ್ತರಕನ್ನಡ ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ಕೋರಿದ್ದಾರೆ.

<><><>

**ದಕ್ಷಿಣಕನ್ನಡ ಜಿಲ್ಲೆಯ** ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ, ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಗಳು, ಶ್ರೀ ಕ್ಷೇತ್ರಕ್ಕೆ ಆಗಮಿಸಿ, ದೇವರ ದರ್ಶನ ಪಡೆಯುತ್ತಿದ್ದಾರೆ.

<><><>

- **ಗ್ರಾಮ ಪಂಚಾಯಿತಿ,** ಅರಿವು ಕೇಂದ್ರಗಳಲ್ಲಿ, ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ, ಮಕ್ಕಳಿಗೆ ಬೇಸಿಗೆ ಶಿಬಿರ.
- **ಕಲ್ಯಾಣ ಕರ್ನಾಟಕದ,** ಏಳು ಜಿಲ್ಲೆಗಳ ಯುವ ಉದ್ಯೋಗಾಕಾಂಕ್ಷಿಗಳಿಗಾಗಿ, ನಾಳೆ ಕಲಬುರಗಿಯಲ್ಲಿ, ವಿಶೇಷ ಉದ್ಯೋಗ ಮೇಳ.
- **ಹುಬ್ಬಳ್ಳಿ-ಧಾರವಾಡದ ಸೂಕ್ಷ್ಮ ಪ್ರದೇಶಗಳಲ್ಲಿ,** ಗಸ್ತು ಹಾಗೂ ಕಣ್ಗಾವಲಿಗೆ ಕ್ರಮ – ಸಂತೋಷ ಲಾಡ.
- **ಭಾರತ ರತ್ನ,** ಬಾಬಾಸಾಹೇಬ ಅಂಬೇಡ್ಕರ್ ಅವರ, 134ನೇ ಜಯಂತಿ; ನಾಡಿನಾದ್ಯಂತ ಗೌರವ ನಮನ.

<><><>